28/1

# 2005

## KANNADA

## Paper 1

## Literature

*Time : 3 Hours ]* *[ Maximum Marks : 300*

### INSTRUCTIONS

*Candidates should attempt **all** the questions in Parts A, B & C. However, they have to choose only **three** questions in Part D. The number of marks carried by each question is indicated at the end of the question.*

*Answers must be written in Kannada. Care should be taken not to exceed, as far as possible, the suggested limit of words.*

[Turn over

## ಭಾಗ A

4×5=20

*ಒಂದೊಂದು ಪ್ರಶ್ನೆಗೂ 50 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**1.** (ಎ) 'ಭಾಷಾ ಸ್ವೀಕರಣ' ಎಂದರೇನು ?

(ಬಿ) ಭಾರತೀಯ ಕಾವ್ಯಮೀಮಾಂಸೆಯಲ್ಲಿ 'ಸಹೃದಯ' ನಿಗೆ ಕೊಡಲಾಗಿರುವ ಮಹತ್ತ್ವವೇನು ?

(ಸಿ) ಬಿ.ಎಂ.ಶ್ರೀ ಅಥವಾ ಮುದ್ದಣರ ಸಾಹಿತ್ಯಸಾಧನೆಯೇನು ?

(ಡಿ) ಕರ್ನಾಟಕದ ಶಿಲ್ಪಕಲೆ, ಶ್ರವಣಬೆಳಗೊಳ - ಇವುಗಳಲ್ಲಿ **ಒಂದನ್ನು** ಕುರಿತು ಬರೆಯಿರಿ.

## ಭಾಗ B

*10×10=100*

*ಪ್ರತಿಯೊಂದು ಪ್ರಶ್ನೆಗೂ 100 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಟಿಪ್ಪಣಿ ಬರೆಯಿರಿ.*

**1.** ಕನ್ನಡ ಭಾಷೆಯ ಬೆಳವಣಿಗೆಯ ಘಟ್ಟಗಳನ್ನು ಪರಿಶೀಲಿಸಿ.

**2.** ಧ್ವನಿ, ಪದ, ವ್ಯಾಕರಣಾಂಶಗಳ ಹಿನ್ನೆಲೆಯಲ್ಲಿ ದ್ರಾವಿಡ ಭಾಷೆಯ ವೈಶಿಷ್ಟ್ಯವನ್ನು ವಿವರಿಸಿ.

**3.** *ಗದಾಯುದ್ಧ, ಪ್ರಭುಲಿಂಗಲೀಲೆ, ಶ್ರೀರಾಮಾಯಣ ದರ್ಶನಂ* - ಇವುಗಳಲ್ಲಿ ಯಾವುದಾದರೂ **ಎರಡರ** ಪರಿಚಯ ಮಾಡಿಕೊಡಿ.

**4.** ಷಟ್ಪದಿ ಅಥವಾ ವಚನ ಸಾಹಿತ್ಯದ ಸಾಧನೆಯನ್ನು ವಿವರಿಸಿ.

**5.** 'ಪ್ರತಿಭೆ' ಎಂದರೇನು ?

**6.** ರಸ ಸಿದ್ಧಾಂತವು ವಿವಿಧ ಆಲಂಕಾರಿಕರಲ್ಲಿ ಬೆಳೆದು ಬಂದಿರುವ ರೀತಿಯನ್ನು ವಿವರಿಸಿ.

**7.** 'ವಿಮರ್ಶೆ' ಎಂದರೇನು ?

**8.** ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳ ಸಾಂಸ್ಕೃತಿಕ ಮಹತ್ವವನ್ನು ವಿವರಿಸಿ.

**9.** ಕರ್ನಾಟಕದ ಏಕೀಕರಣವು ಸಾಕಾರಗೊಂಡ ಬಗೆಯನ್ನು ವಿವರಿಸಿ.

**10.** ಹಂಪೆಯ **ಅಥವಾ** *ಕವಿರಾಜಮಾರ್ಗದ* ಮಹತ್ವವನ್ನು ವಿವರಿಸಿ.

## ಭಾಗ C

*6×15=90*

*ಒಂದೊಂದು ಪ್ರಶ್ನೆಗೂ 150 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**1.** ಕನ್ನಡದ ಪ್ರಾದೇಶಿಕ ಉಪಭಾಷೆಗಳನ್ನು ಕುರಿತು ಬರೆಯಿರಿ.

**2.** ಕಾವ್ಯ ಲಕ್ಷಣಗಳು ಯಾವುವು ? ವಿವರಿಸಿ.

**3.** ಸಾಹಿತ್ಯ ಚರಿತ್ರೆಯಲ್ಲಿ ಚಂಪೂ ಸಾಹಿತ್ಯಕ್ಕೆ **ಅಥವಾ** ದಾಸ ಸಾಹಿತ್ಯಕ್ಕೆ ಇರುವ ಮಹತ್ತ್ವವೇನು ?

**4.** ದಲಿತ-ಬಂಡಾಯ ಸಾಹಿತ್ಯ ಚಳವಳಿಯ ಇತಿಹಾಸವನ್ನೂ ಸಾಧನೆಯನ್ನೂ ಸಂಕ್ಷೇಪವಾಗಿ ಪರಿಚಯ ಮಾಡಿಕೊಡಿ.

**5.** ಜನಪದ ಸಾಹಿತ್ಯದ ಮುಖ್ಯ ತತ್ತ್ವಗಳಾವುವು ? ವಿವರಿಸಿ.

**6.** ಲಕ್ಷ್ಮೀಶ, ಶಿವಕೋಟ್ಯಾಚಾರ್ಯ, ನಂಜುಂಡಕವಿ, ಅಕ್ಕಮಹಾದೇವಿ - ಇವರಲ್ಲಿ ಇಬ್ಬರ ಕವಿ-ಕೃತಿ ಪರಿಚಯ ಮಾಡಿಕೊಡಿ.

## ಭಾಗ D

3×30=90

*ಒಂದೊಂದು ಪ್ರಶ್ನೆಗೂ 300 ಶಬ್ದಗಳ ಮಿತಿಯಲ್ಲಿ ಯಾವುದಾದರೂ* ***ಮೂರು*** *ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**1.** ಕನ್ನಡದಲ್ಲಿ ಲಿಂಗ ವ್ಯವಸ್ಥೆ ರೂಪುಗೊಂಡಿರುವ ಬಗೆಯನ್ನು ವಿವರಿಸಿ.

**2.** ಕರ್ನಾಟಕದ ಧಾರ್ಮಿಕ ಚಳವಳಿಗಳ ಸ್ವರೂಪವನ್ನು ಚಿತ್ರಿಸಿ.

**3.** *ತೀನಂಶ್ರೀಯವರ ಭಾರತೀಯ ಕಾವ್ಯಮೀಮಾಂಸೆ; ವಕ್ರೋಕ್ತಿ, ಮಾನಸಿಕ ದೂರ; ಸಣ್ಣಕತೆಯ ಸ್ವರೂಪ* - ಇವುಗಳಲ್ಲಿ **ಎರಡನ್ನು** ಕುರಿತು ಬರೆಯಿರಿ.

**4.** ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡನಾಡಿನ ಸಹಕಾರ, ಕನ್ನಡ ಗದ್ಯ ಸಾಹಿತ್ಯ - ಇವುಗಳಲ್ಲಿ **ಒಂದನ್ನು** ಕುರುತು ಬರೆಯಿರಿ.

**5.** ಆಡು ಭಾಷೆ, ಮೃತ ಬಾಷೆ, ಹಲ್ಮಿಡಿ ಶಾಸನ, ಕಾಲವಾಚಿ ಪ್ರತ್ಯಯಗಳು - ಇವುಗಳಲ್ಲಿ **ಎರಡನ್ನು** ಕುರಿತು ಬರೆಯಿರಿ.

28/2

# 2005

## KANNADA

## Paper 2

## Literature

*Time : 3 Hours ]* *[ Maximum Marks : 300*

---

### INSTRUCTIONS

*Candidates should attempt* ***all*** *the questions in Parts A, B & C. However, they have to choose only* ***three*** *questions in Part D. The number of marks carried by each question is indicated at the end of the question.*

*Answers must be written in Kannada. Care should be taken not to exceed, as far as possible, the suggested limit of words.*

## ಭಾಗ A

4×5=20

*ಈ ಕೆಳಗಿನ ಪದ್ಯಗಳ ಭಾವ ಮತ್ತು ಸ್ವಾರಸ್ಯವನ್ನು ವಿವರಿಸಿ.*

1. (ಎ) ನಡೆವರೆಡಹದೆ ಕುಳಿತರೆಡಹುವರೆ ಕಾವ್ಯಮಂ
ನಡೆಸುವಾತಂ ರಸಾವೇಶ ಮಱಹಾಲಸ್ಯ
ವೆಡೆಗೊಳಲು ತಪ್ಪುಗಲ್ಲದೆ ಕಾವ್ಯಕರ್ತೃ ತಪ್ಪುವನೆ ಒಂದೆರಡೆಡೆಯೊಳು
ಎಡೆವಾಯ್ದು ಬಂದ ತಪ್ಪಂ ಹಿಡಿದು ಸಾಧಿಸದೆ
ಕಡೆತನಕ ಬಂದ ಲೇಸಿಂಗೆ ತಲೆದೂಗೆ ತಲೆ
ಯೊಡೆವುದೇ ಬೇನೆಯಱಿಯದ ನೀರಸರನೇಕೆ ಪುಟ್ಟಿಸಿದನ ಬುಜ ಭವನು

(ಬಿ) ಕರಿಯಂಜುವುದು ಅಂಕುಶಕ್ಕಯ್ಯ !
ಗಿರಿಯಂಜುವುದು ಕುಲಿಶಕ್ಕಯ್ಯ !
ತಮಂಧವಂಜುವುದು ಜ್ಯೋತಿಗಯ್ಯ !
ಕಾನನವಂಜುವುದು ಬೇಗೆಗಯ್ಯ !
ಪಂಚಮಹಾಪಾತಕ ವಂಜುವುದು
ನಮ್ಮ ಕೂಡಲ ಸಂಗನ ನಾಮಕ್ಕಯ್ಯ !

(ಸಿ) ಆಗಳಾ ಭಕ್ತತತಿ ಬಸವನಂ ನೆಱೆ ನೋಡಿ
ರಾಗದಿಂದಪ್ಪಿ ಮತ್ತಪ್ಪಿ ತಣಿಯದೆ ನೋಡಿ
ನೀನೊಲಿದು ನೋಡಿತ್ತೆ ಶಿವಲಿಂಗವೆಲೆ ಬಸವ
ನೀನೊಲಿದು ಸೋಂಕಿದವನೇ ಭಕ್ತನೆಲೆ ಬಸವ
ನಿನ್ನ ಮನದಿಂದ ಚಿಂತಾಮಣಿಯದಾಯಿತ್ತು
ನಿನ್ನ ಕರಮಂ ಕಂಡು ಕಲ್ಪತರುವಾಯಿತ್ತು
ನಿನ್ನ ಪದರಜದಿಂದೆ ಪರುಷವದು ಹುಟ್ಟಿತ್ತು -
ನಿನ್ನ ಶೀಲಂಗಂಡು ಸುರಭಿ ಹಯನಾಯಿತ್ತು

(ಡಿ) ಕುಲ ಕುಲ ಕುಲವೆನ್ನುತಿಹರು
ಕುಲ ಯಾವುದು ಸತ್ಯ ಸುಖವುಳ್ಳ ಜನರಿಗೆ ||
....... ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯ
ಆತ ಮಹಾತ್ಮನು ನೆಲೆಯಾದಿಕೇಶವ
ಯಾತರ ಕುಲವಯ್ಯ ಆತನೊಲಿದ ಮೇಲೆ ?

## ಭಾಗ B

*10×10=100*

*ಒಂದೊಂದು ಪ್ರಶ್ನೆಗೂ 100 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**1.** ಬಸವರಾಜದೇವರ ರಗಳೆಯಲ್ಲಿ ಹರಿಹರನು ಚಿತ್ರಿಸಿರುವ ಬಸವಣ್ಣನವರ ಸಾಧನೆಗಳನ್ನು ನಿರೂಪಿಸಿ.

**2.** ಸರ್ವಜ್ಞನ ವಚನಗಳಲ್ಲಿ ನೀವು ಗುರುತಿಸುವ ವಿಶಿಷ್ಟ ಗುಣಗಳು ಯಾವುವು ? — ಸೋದಾಹರಣವಾಗಿ ಚಿತ್ರಿಸಿ.

**3.** ರತ್ನಾಕರನು ಚಿತ್ರಿಸಿರುವ ಭರತನ ವ್ಯಕ್ತಿತ್ವದ ಲಕ್ಷಣಗಳಾವುವು ?

**4.** ವಿಶ್ವಾಮಿತ್ರರು ಒಡ್ಡಿದ ತೊಂದರೆಗಳನ್ನು ಹರಿಶ್ಚಂದ್ರನು ಗೆದ್ದ ಬಗೆಯನ್ನು ವಿವರಿಸಿ.

**5.** ಕುವೆಂಪು ಅವರು *'ಬೆರಳ್‌ಗೆಕೊರಳ್'* ನಾಟಕದಲ್ಲಿ ದ್ರೋಣಾಚಾರ್ಯರ ಉಭಯ ಸಂಕಟವನ್ನು ಹೇಗೆ ಚಿತ್ರಿಸಿದ್ದಾರೆ ?

**6.** *'ಅಶ್ವತ್ಥಾಮನ್'* ದುರಂತದ ಕಡೆಗೆ ಸಾಗಿದ ಪರಿಯನ್ನು ವಿವರಿಸಿ.

**7.** ನಮ್ಮ ಭಾಷೆಯ ಶ್ರೇಷ್ಠ ಸಂಪತ್ತು ಎನ್ನಿಸಿದ ಗಾದೆ — ಒಗಟುಗಳ ಸತ್ತ್ವವನ್ನು ಪರಿಚಯ ಮಾಡಿಕೊಡಿ.

**8.** ಭಾರತೀಪುರ ಕಾದಂಬರಿಯಲ್ಲಿ ಚಿತ್ರಿಸಲಾಗಿರುವ ಸಾಮಾಜಿಕ ಸಮಸ್ಯೆಗಳನ್ನು ಪರಿಶೀಲಿಸಿ.

**9.** ನವೋದಯ, ನವ್ಯ ಸಾಹಿತ್ಯಗಳ ಸಾಧನೆಯನ್ನು ತುಲನಾತ್ಮಕವಾಗಿ ಪರಿಶೀಲಿಸಿ.

**10.** ಜನಪದ ಗೀತೆಗಳಲ್ಲಿ ಚಿತ್ರಿತವಾಗಿರುವ ಕೌಟುಂಬಿಕ ದೃಶ್ಯಗಳನ್ನು ವರ್ಣಿಸಿ.

## ಭಾಗ C

6×15=90

*ಒಂದೊಂದು ಪ್ರಶ್ನೆಗೂ 100 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**1.** ಪಂಪನ ಆದಿಪುರಾಣದಲ್ಲಿ ಬರುವ ಭರತ-ಬಾಹುಬಲಿ ಪ್ರಸಂಗದಲ್ಲಿ ನೀವು ಯಾರನ್ನು ಮೆಚ್ಚುತ್ತೀರಿ ? ಏಕೆ ?

**2.** ಬಸವಣ್ಣನವರ ವಚನಗಳಲ್ಲಿ ಕಂಡುಬರುವ "ಸಾಮಾಜಿಕ ಕಾಳಜಿ"ಯನ್ನು ನಿದರ್ಶನ ಪೂರ್ವಕವಾಗಿ ಚಿತ್ರಿಸಿ.

**3.** ಕನ್ನಡ ಲಲಿತಪ್ರಬಂಧಗಳ ಸಾಧನೆಯನ್ನು ಗೊರೂರರ *ಹೊಸಗನ್ನಡ ಪ್ರಬಂಧ* ಸಂಕಲನದ ಆಧಾರದಿಂದ ವಿವರಿಸಿ.

**4.** ಭೀಷ್ಮರಿಗೆ ಸೇನಾಧಿಪತಿ ಪಟ್ಟವನ್ನು ಕಟ್ಟುವುದಕ್ಕೆ ಕೌರವನು ನಿರ್ಧರಿಸಿದಾಗ ಕರ್ಣನು ಎತ್ತಿದ ಆಕ್ಷೇಪಣೆ ಏನು ? ಭೀಷ್ಮರು ಅದಕ್ಕೆ ನೀಡಿದ ಉತ್ತರವೇನು ?

**5.** ಸಂಧಿಗೆಂದು ಹಸ್ತಿನಾವತಿಗೆ ಬಂದ ಶ್ರೀಕೃಷ್ಣನು ಕರ್ಣನನ್ನು ಭೇಟಿಮಾಡಿದ ಸಂದರ್ಭದ ಸೂಕ್ಷ್ಮಗಳನ್ನು ವಿವರಿಸಿ.

**6.** ಶ್ರೀ.ಕೆ. ನರಸಿಂಹಮೂರ್ತಿಯವರು ಸಂಪಾದಿಸಿರುವ '*ಕನ್ನಡದ ಅತ್ಯುತ್ತಮ ಸಣ್ಣಕಥೆಗಳು*' ಹೇಗೆ 'ಅತ್ಯುತ್ತಮ'ವಾಗಿವೆ ಎಂಬುದನ್ನು ನಿದರ್ಶನಪೂರ್ವಕವಾಗಿ ಚಿತ್ರಿಸಿ.

## ಭಾಗ D

*3×30=90*

*ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಮೂರಕ್ಕೆ** ಉತ್ತರ ಬರೆಯಿರಿ. ಪ್ರತಿ ಪ್ರಶ್ನೆಗೂ 300 ಶಬ್ದಗಳ ಮಿತಿಯಲ್ಲಿ ಉತ್ತರ ಬರೆಯಬೇಕು.*

**1.** ಕುವೆಂಪು ಅವರ "*ಮಲೆಗಳಲ್ಲಿ ಮದುಮಗಳು*" ಕಾದಂಬರಿಯು 'ಮಲೆನಾಡ ಜೀವನದ ಒಂದು ವಿಶ್ವಕೋಶ' ಎಂದು ಹೇಳಬಹುದೆ ?

**2.** ಕುಮಾರವ್ಯಾಸನ '*ಉದ್ಯೋಗಪರ್ವ ಸಂಗ್ರಹ*'ದಲ್ಲಿ ರಾಯಭಾರಿ ಶ್ರೀಕೃಷ್ಣನ ಬಹುಮುಖ ಪ್ರತಿಭೆಯು ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

**3.** ಬಿ.ಎಮ್.ಶ್ರೀಕಂಠಯ್ಯ, ಶಿವರಾಮ ಕಾರಂತ, ಪಂಪ, ರತ್ನಾಕರವರ್ಣಿ ಇವರಲ್ಲಿ **ಇಬ್ಬರನ್ನು** ಕುರಿತು ಬರೆಯಿರಿ.

**4.** 'ಹರಿಶ್ಚಂದ್ರ-ಗಾನರಾಣಿಯರು', ಶ್ವೇತ-ಭೀಷ್ಮರ ಯುದ್ಧ *(ಪಂಪಭಾರತ)*, ಶ್ರೀಮತಿ-ವಜ್ರಜಂಘರ ಪ್ರಸಂಗ, ದ್ವಾರಕಿಯಲ್ಲಿ ಕೌರವ-ಅರ್ಜುನರು ಶ್ರೀಕೃಷ್ಣನನ್ನು ಕಂಡ ಸಂದರ್ಭ - ಇವುಗಳಲ್ಲಿ **ಎರಡನ್ನು** ಕುರಿತು ಬರೆಯಿರಿ.

**5.** *ಬೆರಳ್‌ಗೆ ಕೊರಳ್* ನಾಟಕದಲ್ಲಿ ಏಕಲವ್ಯ-ಅರ್ಜುನರ ಮಧ್ಯೆ ನಡೆದ ಸಂಭಾಷಣೆ, *ಅಶ್ವತ್ಥಾಮನ್* ನಾಟಕದಲ್ಲಿ ಬರುವ ಬನವಾಸಿಯ ವರ್ಣನೆ, ಶ್ಮಶಾನದಲ್ಲಿ ಚಂದ್ರಮತಿ-ಹರಿಶ್ಚಂದ್ರರ ನಡುವೆ ನಡೆದ ಸಂಭಾಷಣೆ - ಇವುಗಳಲ್ಲಿ ಯಾವುದಾದರೂ **ಎರಡನ್ನು** ಪರಿಶೀಲಿಸಿ.